ಓಂ ಶಾಂತಿ, ಬಾಪ್‌ದಾದಾ , ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 15-12-2001

# *ಏಕವ್ರತದವರಾಗಿ ಪವಿತ್ರತೆಯ ಧಾರಣೆಯ ಮುಖಾಂತರ ಆತ್ಮೀಯತೆಯಲ್ಲಿದ್ದು ಮನಸಾ ಸೇವೆಯನ್ನು ಮಾಡಿರಿ*

(एकव्रता बन पवित्रता की धारणा द्वारा रूहानियत में रह मनसा सेवा करो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಆತ್ಮಿಕ ತಂದೆ ನಾಲ್ಕಾರು ಕಡೆಯ ಆತ್ಮಿಕ ಮಕ್ಕಳ ಆತ್ಮೀಯತೆಯನ್ನು ನೋಡುತ್ತಿದ್ದರು. ಪ್ರತಿಯೊಬ್ಬ ಮಕ್ಕಳಲ್ಲಿ ಆತ್ಮೀಯತೆಯ ಹೊಳಪು ಎಷ್ಟಿದೆ ಎಂದು. ಆತ್ಮೀಯತೆ ನಯನಗಳಿಂದ ಪ್ರತ್ಯಕ್ಷವಾಗುತ್ತದೆ. ಆತ್ಮೀಯತೆಯ ಶಕ್ತಿಯಿರುವ ಆತ್ಮ ಸದಾ ನಯನಗಳಿಂದ ಇತರರಿಗೂ ಸಹ ಆತ್ಮೀಯತೆಯ ಶಕ್ತಿಯನ್ನು ನೀಡುತ್ತಾರೆ. ಆತ್ಮೀಯತೆಯ ಮುಗುಳ್ನಗೆ ಅನ್ಯರಿಗೂ ಸಹ ಖುಷಿಯ ಅನುಭವವನ್ನು ಮಾಡಿಸುತ್ತದೆ. ಅವರ ಚಲನೆ, ಮುಖಪುಟವು ಫರಿಶ್ತೆಗಳ ಸಮಾನ ಡಬಲ್ ಲೈಟ್ ರೂಪದಲ್ಲಿ ಕಾಣಿಸುತ್ತದೆ. ಈ ರೂಪದ ಆತ್ಮೀಯತೆಗೆ ಅಧಾರವು ಪವಿತ್ರತೆಯಾಗಿದೆ. ಪವಿತ್ರತೆಯು ಎಷ್ಟೆಷ್ಟು ಮನ, ವಚನ, ಕರ್ಮದಲ್ಲಿ ಕಾಣಿಸುತ್ತದೆಯೋ ಅಷ್ಟು ಆತ್ಮೀಯತೆಯು ಕಂಡುಬರುತ್ತದೆ. ಪವಿತ್ರತೆ ಬ್ರಾಹ್ಮಣ ಜೀವನದ ಶೃಂಗಾರವಾಗಿದೆ. ಪವಿತ್ರತೆ ಬ್ರಾಹ್ಮಣ ಜೀವನದ ಮರ್ಯಾದೆಯಾಗಿದೆ. ಆದ್ದರಿಂದ ಬಾಪ್‌ದಾದಾ ಪ್ರತಿಯೊಬ್ಬ ಮಗುವಿನ ಪವಿತ್ರತೆಯ ಆಧಾರದಿಂದ ಕೂಡಿದ ಆತ್ಮೀಯತೆಯನ್ನು ನೋಡುತ್ತಿದ್ದರು. ಆತ್ಮೀಯತೆಯ ಶಕ್ತಿಯಿರುವ ಆತ್ಮ ಈ ಲೋಕದಲ್ಲಿ ಅಲೌಕಿಕ ಫರಿಶ್ತೆಗಳಂತೆ ಕಾಣುತ್ತಾರೆ . ಆದ್ದರಿಂದ ತಮ್ಮನ್ನು ತಾವೇ ನೋಡಿಕೊಳ್ಳಿರಿ, ಚೆಕ್ ಮಾಡಿಕೊಳ್ಳಿ-ನನ್ನ ಸಂಕಲ್ಪ, ಮಾತಿನಲ್ಲಿ ಎಷ್ಟು ಆತ್ಮೀಯತೆಯಿದೆ? ಆತ್ಮೀಯತೆಯ ಸಂಕಲ್ಪ ತಮ್ಮಲ್ಲಿಯೂ ಶಕ್ತಿ

ತುಂಬುವಂತಹದ್ದಾಗಿದೆ ಮತ್ತು ಅನ್ಯರಿಗೂ ಶಕ್ತಿಯನ್ನು ನೀಡುತ್ತದೆ. ಇದನ್ನೇ ಬೇರೆ ಶಬ್ದಗಳಲ್ಲಿ ಆತ್ಮೀಯತೆಯ ಸಂಕಲ್ಪ ಮನಸಾ ಸೇವೆಗೆ ನಿಮಿತ್ತವಾಗುತ್ತದೆ ಎಂದು ಹೇಳಲಾಗುತ್ತದೆ. ಆತ್ಮಿಕ ಮಾತು ಸ್ವಯಂಗೆ ಮತ್ತು ಅನ್ಯರಿಗೆ ಸುಖದ ಅನುಭವವನ್ನು ಮಾಡಿಸುತ್ತದೆ. ಶಾಂತಿಯ ಅನುಭವವನ್ನು ಮಾಡಿಸುತ್ತದೆ. ಒಂದು ಆತ್ಮಿಕ ಮಾತೂ ಸಹ ಅನ್ಯ ಆತ್ಮರ ಜೀವನದಲ್ಲಿ ಮುಂದುವರೆಯಲು ಆಧಾರವಾಗುತ್ತದೆ. ಆತ್ಮಿಕ ಮಾತನ್ನಾಡುವವರು ವರದಾನಿ ಆತ್ಮರಾಗುತ್ತಾರೆ. ಆತ್ಮಿಕ ಕರ್ಮ ಸಹಜವಾಗಿ ಸ್ವಯಂಗೆ ಕರ್ಮಯೋಗಿ ಸ್ಥಿತಿಯನ್ನು ಅನುಭವ ಮಾಡಿಸುತ್ತದೆ ಮತ್ತು ಅನ್ಯರಿಗೂ ಕರ್ಮಯೋಗಿಗಳಾಗುವಂತಹ ಆದರೆ ಸ್ಯಾಂಪಲ್ (ಮಾದರಿ) ಆಗುತ್ತಾರೆ. ಆದರೆ ಆತ್ಮೀಯತೆಯ ಬೀಜವಾಗಿದೆ ಪವಿತ್ರತೆ, ಪವಿತ್ರತೆ ಸ್ವಪ್ನದಲ್ಲಿಯೂ ಭಂಗವಾಗಬಾರದು, ಆಗ ಆತ್ಮೀಯತೆಯ ಶಕ್ತಿಯು ಕಂಡುಬರುತ್ತದೆ. **ಪವಿತ್ರತೆ ಎಂದರೆ ಕೇವಲ ಬ್ರಹ್ಮಚರ್ಯ ಮಾತ್ರವಲ್ಲ, ಆದರೆ ಪ್ರತಿಯೊಂದು ಮಾತಿನಲ್ಲಿ, ಪ್ರತಿಯೊಂದು ಸಂಕಲ್ಪದಲ್ಲಿ, ಪ್ರತಿಯೊಂದು ಕರ್ಮದಲ್ಲಿ ಬ್ರಹ್ಮಾಚಾರಿಗಳು.** ಹೇಗೆ ಲೌಕಿಕದಲ್ಲಿ ಕೆಲವು-ಕೆಲವು ಮಕ್ಕಳ ಮುಖವು ತಂದೆಯಂತೆ ಇರುತ್ತದೆ. ಆಗ ಇವರಲ್ಲಿ ಆ ತಂದೆಯೇ ಕಾಣುತ್ತಾರೆ ಎಂದು ಹೇಳುತ್ತಾರೆ. ಅದೇ ರೀತಿ ಬ್ರಹ್ಮಾಚಾರಿ ಬ್ರಾಹ್ಮಣ ಆತ್ಮರ ಮುಖವು ಆತ್ಮೀಯತೆಯ ಆಧಾರದಿಂದ ಬ್ರಹ್ಮಾತಂದೆ ಸಮಾನ ಅನುಭವವಾಗಬೇಕು, ಸಂಪರ್ಕದಲ್ಲಿ ಬರುವ ಆತ್ಮರು ಇವರು ತಂದೆಯ ಸಮಾನರಾಗಿದ್ದಾರೆ ಎಂಬ ಅನುಭವವನ್ನು ಮಾಡಬೇಕು. ಆದರೆ ನೂರು ಪ್ರತಿಶತ (%) ಇಲ್ಲದಿದ್ದರೂ ಸಮಯಾನುಸಾರ ಎಷ್ಟು ಪ್ರತಿಶತ (%) ಕಂಡುಬರುತ್ತಿದೆ? ಎಲ್ಲಿಯವರೆಗೆ ತಲುಪಿದ್ದೀರಿ? 75%, 80%, 90% ಎಲ್ಲಿಯವರೆಗೆ ತಲುಪಿದ್ದೀರಿ? ಮುಂದೆ ಕುಳಿತಿರುವವರು ತಿಳಿಸಿ, ನೋಡಿ ಕುಳಿತುಕೊಳ್ಳಲು ಮುಂದಿನ ಲೈನ್ ಪಡೆದಿದ್ದೀರಿ, ಅದೇ ರೀತಿ ಬ್ರಹ್ಮಾಚಾರಿಗಳಾಗುವುದರಲ್ಲಿಯೂ ಮುಂದಿನ ನಂಬರ್ ಪಡೆಯುತ್ತೀರಲ್ಲವೇ! ಮುಂದಿನ ನಂಬರ್ ಪಡೆಯುತ್ತೀರಿ ತಾನೆ?

ಬಾಪ್‌ದಾದಾ ಎಲ್ಲಾ ಮಕ್ಕಳ ಪವಿತ್ರತೆಯ ಆಧಾರದ ಮೇಲೆ ಆತ್ಮೀಯತೆಯನ್ನು ನೋಡಲು ಬಯಸುತ್ತಾರೆ. ಬಾಪ್‌ದಾದಾರವರ ಬಳಿ ಎಲ್ಲರ ಚಾರ್ಟ್ ಅಂತೂ ಇದೆ. ತಿಳಿಸುವುದಿಲ್ಲ. ಆದರೆ ಚಾರ್ಟ್ ಇದೆ, ಏನೇನು ಮಾಡುತ್ತೀರಿ, ಹೇಗೆ ಮಾಡುತ್ತೀರಿ ಎಂಬ ಎಲ್ಲರ ಚಾರ್ಟ್ ಬಾಪ್‌ದಾದಾರವರ ಬಳಿ ಇದೆ. ಈಗಲೂ ಕೆಲವು-ಕೆಲವು ಮಕ್ಕಳಲ್ಲಿ ಪವಿತ್ರತೆಯಲ್ಲಿ ಫಲಿತಾಂಶವು ತುಂಬಾ ಕಡಿಮೆ ಪ್ರತಿಶತವಿದೆ. ಸಮಯದ ಅನುಸಾರ ವಿಶ್ವದ ಆತ್ಮರು ನಿಮ್ಮ ಆತ್ಮೀಯತೆಯ ಉದಾಹರಣೆಯನ್ನು ನೋಡಲು ಬಯಸುತ್ತಾರೆ. ಇದರ ಸಹಜ ಸಾಧನೆ ಆಗಿದೆ ಒಂದೇ ಒಂದು ಶಬ್ದದ ಬಗ್ಗೆ ಗಮನ ಇಡುವುದು. ಪದೇ-ಪದೇ ಈ ಒಂದು ಶಬ್ದವನ್ನು ತನಗೆ ತಾನೇ ಅಂಡರ್ಲೈನ್ ಮಾಡಿಕೊಳ್ಳುವುದು, ಆ ಒಂದು ಶಬ್ದವಾಗಿದೆ ಏಕವ್ರತಾ ಭವ! ಎಲ್ಲಿ ಒಬ್ಬರೇ ಇರುತ್ತಾರೆಯೂ ಅಲ್ಲಿ ಏಕಾಗ್ರತೆಯು ಸ್ವತಃವಾಗಿ ಬರುತ್ತದೆ. ಅಚಲ, ಸ್ಥಿರವಾಗಿ ಸ್ವತಃವಾಗಿ ಆಗುತ್ತೇವೆ. ಏಕವ್ರತರಾಗುವುದರಿಂದ ಏಕಮತದಲ್ಲಿಯೇ ನಡೆಯುವುದು ಸಹಜವಾಗುತ್ತದೆ. ಇರುವುದೇ ಒಂದೇ ವ್ರತ, ಹಾಗಾಗೆ ಒಂದೇ ಮತದಿಂದ ಸದ್ಗತಿ ಸಹಜವಾಗುತ್ತದೆ. ಏಕರಸ ಸ್ಥಿತಿ ಸ್ವತಹವಾಗಿ ಆಗುತ್ತದೆ. ಆದ್ದರಿಂದ ಚೆಕ್ ಮಾಡಿಕೊಳ್ಳಿ - ಏಕವ್ರತ ಇದೆಯೇ? ಇಡೀ ದಿನದಲ್ಲಿ ಮನಸ್ಸು, ಬುದ್ಧಿ ಏಕವ್ರತದಲ್ಲಿ ಇರುತ್ತದೆಯೇ? ಲೆಕ್ಕಾಚಾರದಲ್ಲಿಯೂ ಆದಿಯ ಲೆಕ್ಕಾಚಾರ ಒಂದರಿಂದ ಶುರುವಾಗುತ್ತದೆ. ಒಂದು ಬಿಂದು ಮತ್ತು ಒಂದು ಶಬ್ದ, ಒಂದರ ಮುಂದೆ ಸೊನ್ನೆ ಹಾಕುತ್ತಾ ಹೋಗಿ, ಎಷ್ಟು ಹೆಚ್ಚುತ್ತಾ ಹೋಗುತ್ತದೆ. ಬೇರೆ ಏನೂ ನೆನಪಿರದಿದ್ದರೂ ಒಂದು ಶಬ್ದ ನೆನಪಿರುತ್ತದೆ ಅಲ್ಲವೇ! ಸಮಯ, ಆತ್ಮರು, ಏಕವ್ರತಾ ಆತ್ಮರಾದ ತಮ್ಮನ್ನು ಕೂಗುತ್ತಿದ್ದಾರೆ. ಸಮಯದ ಕೂಗು, ಆತ್ಮರ

ಕೂಗು - ಹೇ ದೇವಾತ್ಮರೇ ಎಂಬ ಕೂಗು ಕೇಳಿಸುವುದಿಲ್ಲವೇ? ಪ್ರಕೃತಿಯೂ ಸಹ ಪ್ರಕೃತಿಪತಿಯರಾದ ತಮ್ಮನ್ನು ನೋಡಿ-ನೋಡಿ ಕರೆಯುತ್ತಿದೆ - ಹೇ! ಪ್ರಕೃತಿ ಪತಿ ಆತ್ಮರೇ ಈಗಲೇ ಪರಿವರ್ತನೆ ಮಾಡಿ. ಮಧ್ಯ-ಮಧ್ಯದಲ್ಲಿ ಚಿಕ್ಕ-ಚಿಕ್ಕ ವಿಕೋಪಗಳಂತೂ ಆಗುತ್ತಿರುತ್ತವೆ. ಇದರಿಂದ ಆತ್ಮರನ್ನು ಮತ್ತೆ-ಮತ್ತೆ ದುಃಖ, ಭಯಭೀತರನ್ನಾಗಿ ಮಾಡಬೇಡಿ. ನೀವು ಮುಕ್ತಿಯನ್ನು ನೀಡುವಂತಹ ಮಾಸ್ಟರ್ ಮುಕ್ತಿದಾತ ಆತ್ಮರು. ಇನ್ನು ಯಾವಾಗ ಈ ಎಲ್ಲಾ ಆತ್ಮರಿಗೆ - ಮುಕ್ತಿಯನ್ನು ನೀಡುತ್ತೀರಿ? ಮನಸ್ಸಿನಲ್ಲಿ ದಯೆ ಬರುವುದಿಲ್ಲವೇ? ಸಮಾಚಾರವನ್ನು ಕೇಳಿ, ಆಗಿಹೋಯಿತೆಂದು ಸುಮ್ಮನಾಗಿಬಿಡುತ್ತೀರಾ? ಅದ್ದರಿಂದ ಬಾಪ್‌ದಾದಾ ಪ್ರತಿಯೊಬ್ಬ ಮಗುವಿನ ದಯಾ ಸ್ವರೂಪವನ್ನು ನೋಡಲು ಬಯಸುತ್ತಾರೆ. ತಮ್ಮ ಹದ್ದಿನ ಮಾತನ್ನು ಬಿಟ್ಟುಬಿಡಿ. ದಯಾಹೃದಯಿಗಳಾಗಿ ಮನಸಾ ಸೇವೆಯಲ್ಲಿ ತೊಡಗಿರಿ. ಸಕಾಶ, ಶಾಂತಿ, ಆಶ್ರಯ ನೀಡಿ. ದಯಾಹೃದಯಿಗಳಾಗಿ ಅನ್ಯರಿಗೆ ಆಶ್ರಯ ಕೊಡುವುದರಲ್ಲಿ ತತ್ಪರರಾಗಿದ್ದರೆ ಈ ಹದ್ದಿನ ಆಕರ್ಷಣೆಗಳಿಂದ, ಹದ್ದಿನ ಮಾತುಗಳಿಂದ ಸ್ವಯಂ ದೂರವಾಗಿರುತ್ತೀರಿ. ಶ್ರಮ ಪಡುವುದರಿಂದ ಮುಕ್ತರಾಗುತ್ತೀರಿ. ವಾಣಿಯ ಸೇವೆಯಲ್ಲಿ ಬಹಳ ಸಮಯವನ್ನು ನೀಡಿದ್ದೀರಿ, ಸಮಯವನ್ನು ಸಫಲಗೊಳಿಸಿದ್ದೀರಿ, ಸಂದೇಶ ನೀಡಿದ್ದೀರಿ. ಆತ್ಮರನ್ನು ಸಂಬಂಧ-ಸಂಪರ್ಕದಲ್ಲಿ ತಂದಿದ್ದೀರಿ. ನಾಟಕದ ಅನುಸಾರ ಯಾವುದನ್ನು ಮಾಡಿದ್ದೀರೋ ಅದನ್ನು ಬಹಳ ಚೆನ್ನಾಗಿ ಮಾಡಿದ್ದೀರಿ. ಆದರೆ **ಈಗ ವಾಣಿಯ ಜೊತೆಗೆ ಮನಸಾ ಸೇವೆಯ ಆವಶ್ಯಕತೆ ಬಹಳ ಇದೆ ಮತ್ತು ಈ ಮನಸಾ ಸೇವೆಯನ್ನು ಪ್ರತಿಯೊಬ್ಬ ಹೊಸ ಮಕ್ಕಳು, ಹಳೆಯ ಮಕ್ಕಳು, ಮಹಾರಥಿಗಳು, ಕುದರೆ ಸವಾರರು, ಕಾಲಾಳುಗಳು ಎಲ್ಲರೂ ಮಾಡಬಹುದಾಗಿದೆ. ಇದನ್ನು ದೊಡ್ಡವರು ಮಾಡುತ್ತಾರೆ, ನಾವಂತೂ ಚಿಕ್ಕವರು, ನಾವು ರೋಗಿಗಳು, ನಾವು ಸಾಧನೆಯುಳ್ಳವರಲ್ಲ, ಇಂತಹ ಯಾವುದೇ ಆಧಾರ ಬೇಕಾಗಿಲ್ಲ. ಮನಸಾ ಸೇವೆಯನ್ನು ಚಿಕ್ಕ-ಚಿಕ್ಕ ಮಕ್ಕಳೂ ಸಹ ಮಾಡಬಹುದಾಗಿದೆ. ಮಕ್ಕಳೇ! ಮಾಡಬಹುದಲ್ಲವೇ? (ಹೌದು)** ಮನಸಾ ಸೇವೆಯನ್ನು ಮಾಡಬಹುದಲ್ಲವೇ. ಆದ್ದರಿಂದ **ಈಗ ವಾಚಾ ಮತ್ತು ಮನಸಾ ಸೇವೆಯ ಸಮತೋಲನ ಇರಬೇಕು.** ಮನಸಾ ಸೇವೆ ಮಾಡುವವರಿಗೂ ಸಹ ಬಹಳ ಲಾಭವಿದೆ. ಏಕೆ? ಯಾವ ಅತ್ಮರಿಗೆ **ಮನಸಾ ಸೇವೆ ಅರ್ಥಾತ್ ಸಂಕಲ್ಪದ ಮೂಲಕ ಶಕ್ತಿ ಮತ್ತು ಸಕಾಶವನ್ನು ಕೊಡುತ್ತೀರೋ ಆ ಆತ್ಮ ತಮಗೆ ಆಶೀರ್ವಾದಗಳನ್ನು  ನೀಡುತ್ತದೆ. ಹಾಗೂ ತಮ್ಮ ಖಾತೆಯಲ್ಲಿ ಸ್ವಯಂನ ಪುರುಷಾರ್ಥವಂತೂ ಇದ್ದೇ ಇದೆ. ಜೊತೆಜೊತೆಗೆ ಆಶೀರ್ವಾದದ ಖಾತೆಯೂ ಜಮಾ ಆಗುತ್ತದೆ. ಇದರಿಂದ ತಮ್ಮ ಜಮಾದ ಖಾತೆ ಡಬಲ್ ರೀತಿಯಲ್ಲಿ ಹೆಚ್ಚುತ್ತಾ ಹೋಗುತ್ತದೆ. ಆದುದರಿಂದ ಹೊಸ ಮಕ್ಕಳೇ ಆಗಲಿ, ಹಳೆಯ ಮಕ್ಕಳೇ ಆಗಲಿ, ಏಕೆಂದರೆ ಬಹಳ ಹೊಸ ಮಕ್ಕಳೇ ಬಂದಿದ್ದೀರಲ್ಲವೇ! ಹೊಸ ಮಕ್ಕಳು ಯಾರು ಮೊದಲನೆಯ ಬಾರಿಗೆ ಬಂದಿದ್ದೀರೋ ಅವರು ಕೈ ಎತ್ತಿರಿ. ಮೊದಲನೇ ಬಾರಿ ಬಂದಿರುವ ಮಕ್ಕಳೊಂದಿಗೂ ಸಹ ಬಾಪ್‌ದಾದಾ ಕೇಳುತ್ತಾರೆ. ತಾವು ಆತ್ಮರು ಮನಸಾ ಸೇವೆಯನ್ನು ಮಾಡಬಹುದಲ್ಲವೇ?** (ಬಾಪ್‌ದಾದಾ ಪಾಂಡವರೊಂದಿಗೆ, ಮಾತೆಯರೊಂದಿಗೆ - ನಿಮಗೂ ಸಹ ಮನಸಾ ಸೇವೆಯನ್ನು ಮಾಡಲು ಸಾಧ್ಯವಿದೆಯೇ? ಎಂದು ಕೇಳಿದರು) ಎಲ್ಲರೂ ಬಹಳ ಚೆನ್ನಾಗಿ ಕೈ ಎತ್ತಿದ್ದೀರಿ. ಈಗ ಬಾಪ್‌ದಾದಾ ಟಿ.ವಿಯಲ್ಲಿ ನೋಡುತ್ತಿರುವವರಿಗೆ ಮತ್ತು ಸಮ್ಮುಖದಲ್ಲಿ ಕೇಳುತ್ತಿರುವವರಿಗೆ, ಎಲ್ಲಾ ಮಕ್ಕಳಿಗೂ ಜವಾಬ್ದಾರಿ ಕೊಡುತ್ತಾರೆ, ಏನೆಂದರೆ ಇಡೀ ದಿನದಲ್ಲಿ ಎಷ್ಟು ಗಂಟೆಗಳು ಮನಸಾ ಸೇವೆಯನ್ನು ಯಥಾರ್ಥ ರೀತಿಯಿಂದ ಮಾಡಿದಿರಿ. ಕೇವಲ ಮಾಡಿದೆವೆಂದು ಹೇಳಬಾರದು. ಯಥಾರ್ಥ ರೂಪದಲ್ಲಿ ಎಷ್ಟು ಗಂಟೆಗಳು ಮನಸಾ ಸೇವೆಯನ್ನು ಮಾಡಿದಿರಿ? ಇದರ ಚಾರ್ಟನ್ನು ಪ್ರತಿಯೊಬ್ಬರೂ ತಮ್ಮ ಬಳಿ ಇಟ್ಟುಕೊಳ್ಳಬೇಕಾಗಿದೆ. ನಂತರ ಬಾಪ್‌ದಾದಾ

ಅಚಾನಕ್ ಚಾರ್ಟ್ ಕೇಳುತ್ತಾರೆ. ಇದರ ದಿನಾಂಕ ತಿಳಿಸುವುದಿಲ್ಲ. ಅಚಾನಕ್ ಕೇಳುತ್ತಾರೆ, ನೋಡೋಣ ಜವಾಬ್ದಾರಿಯ ಕಿರೀಟ ತೊಟ್ಟುಕೊಳ್ಳುವವರೋ ಅಥವಾ ಅಲುಗಾಡುತ್ತಿರುತ್ತದೆಯೋ? ಜವಾಬ್ದಾರಿಯ ಕಿರೀಟವನು ಇಟ್ಟುಕೊಂಡಿದ್ದಿರಲ್ಲವೇ! ಶಿಕ್ಷಕಿಯರು ಜವಾಬ್ದಾರಿಯ ಕಿರೀಟವನ್ನು ಇಟ್ಟುಕೊಂಡಿದ್ದೀರಲ್ಲವೇ! ಈಗ ಅದರಲ್ಲಿ ಇದನ್ನು ಸೇರಿಸಿಕೊಳ್ಳಿ. ಸರಿಯಲ್ಲವೇ! ಡಬಲ್ ವಿದೇಶದವರು ಕೈ ಎತ್ತಿ. ಈ ಜವಾಬ್ದಾರಿಯ ಕಿರೀಟ ಚೆನ್ನಾಗಿದೆಯಲ್ಲವೇ? ಆದ್ದರಿಂದ ಚಾರ್ಟ್ ಇಡುತ್ತೀರಲ್ಲವೇ? ಒಳ್ಳೆಯದು ಬಾಪ್‌ದಾದಾ ಆಚಾನಕ್ ಒಂದು ದಿವಸ ಕೇಳುತ್ತಾರೆ, ತಮ್ಮ ತಮ್ಮ ಚಾರ್ಟ್ ಬರೆದು ಕಳುಹಿಸಿ ಎಂದು, ನಂತರ ನೋಡುತ್ತಾರೆ. ಏಕೆಂದರೆ ವರ್ತಮಾನ ಸಮಯ ಮನಸಾ ಸೇವೆಯ ಅವಶ್ಯಕತೆ ಬಹಳ ಇದೆ. ತಮ್ಮದೇ ಪರಿವಾರದ ದುಃಖವನ್ನು ಈಗ ನೋಡುತ್ತಿದ್ದೀರಲ್ಲವೇ! ನೋಡಬಹುದಲ್ಲವೇ? ದುಃಖಿ ಆತ್ಮರಿಗೆ ಆಶ್ರಯವನ್ನು ನೀಡಿ. ನಾವು ಒಂದು ಹನಿಗಾಗಿ ಬಾಯಾರಿದ್ದೇವೆ ಎಂದು ಯಾವ ಗೀತೆ ಇದೆ, ಅದರ ಅರ್ಥ ಈಗಿನ ಸಮಯದಲ್ಲಿ ಸುಖ, ಶಾಂತಿಯ ಒಂದು ಹನಿಗೋಸ್ಕರ ಆತ್ಮರು ಬಾಯಾರಿದ್ದಾರೆ ಎಂದು. ಒಂದು ಸುಖ, ಶಾಂತಿಯ ಅಮೃತದ ಹನಿ ಸಿಗುವುದರಿಂದ ಖುಷಿಯಾಗುತ್ತಾರೆ. ಬಾಪ್‌ದಾದಾ ಪದೇ-ಪದೇ - ತಿಳಿಸುತ್ತಾರೆ ಸಮಯ ನಿಮಗಾಗಿ ಕಾಯುತ್ತಿದೆ. ಬ್ರಹ್ಮಾ ತಂದೆ ಮನೆಯ ಬಾಗಿಲು ತೆರೆಯಲು ಕಾಯುತ್ತಿದ್ದಾರೆ. ಪ್ರಕೃತಿ ತೀವ್ರಗತಿಯಿಂದ ಸ್ವಚ್ಛ ಮಾಡಲು ಕಾಯುತ್ತಿದೆ. ಹೇ! ಫರಿಶ್ತೆಗಳೇ ಈಗ ನಿಮ್ಮ ಡಬಲ್ ಲೈಟ್ನ ಮುಖಾಂತರ ಕಾಯುವುದನ್ನು ಸಮಾಪ್ತಿ ಮಾಡಿ. ಎವರ್ರೆಡಿ ಎನ್ನುವ ಶಬ್ದವನ್ನು ಎಲ್ಲರೂ ಹೇಳುತ್ತಾರೆ, ಆದರೆ ಸಂಪನ್ನ ಮತ್ತು ಸಂಪೂರ್ಣರಾಗುವುದರಲ್ಲಿ ಎವರ್ರೆಡಿ ಆಗಿದ್ದೀರಾ? ಶರೀರವನ್ನು ಬಿಡುವುದರಲ್ಲಿ ಮಾತ್ರ ಎವರ್ರೆಡಿ ಆಗುವುದಲ್ಲ, ಆದರೆ ತಂದೆಯ ಸಮಾನವಾಗಿ ಹೋಗುವುದರಲ್ಲಿ ಎವರ್ರೆಡಿ ಆಗಬೇಕಾಗಿದೆ.

ಮಧುಬನದಲ್ಲಿ ಎಲ್ಲರೂ ಮುಂದುವರೆಯುತ್ತಿದ್ದಾರೆ, ಒಳ್ಳೆಯದು. ಸೇವೆಯನ್ನು ಚೆನ್ನಾಗಿ ಮಾಡುತ್ತಿದ್ದೀರಿ. ಮಧುಬನದವರು ಎವರ್ರೆಡಿ ಆಗಿದ್ದೀರಾ? ಮುಗುಳ್ನಗುತ್ತಿದ್ದರು, ಭಲೇ ಮೊದಲನೆಯ ಸಾಲಿನಲ್ಲಿ ಕುಳಿತಿರುವ ಮಹಾರಥಿಗಳೇ ಎವರ್ರೆಡಿ ಆಗಿದ್ದೀರಾ? ತಂದೆಯ ಸಮಾನವಾಗುವುದರಲ್ಲಿ ಎವರ್ರೆಡಿ ಆಗಿದ್ದೀರಾ? ಈ ರೀತಿ ತಿಳಿದರೆ ಅಡ್ವಾನ್ಸ್ ಪಾರ್ಟಿಯಲ್ಲಿ ಹೋಗುತ್ತೀರಿ. ಅಡ್ವಾನ್ಸ್ ಪಾರ್ಟಿ ಬಯಸದ್ದಿದ್ದರೂ ಹೆಚ್ಚುತ್ತದೆ. ಹಾಗಾದರೆ ಇದರಲ್ಲಿ ತತ್ಪರ (ಬಿಜಿ)ರಾಗುತ್ತೀರಲ್ಲವೇ! **ವಾಣಿ ಮತ್ತು ಮನಸಾ ಸೇವೆಯಲ್ಲಿ ಸಮತೋಲನ ಇದ್ದರೆ ಆಶೀರ್ವಾದ ಸಿಗುತ್ತದೆ. ಡಬಲ್ ಖಾತೆ ಜಮಾ ಆಗುತ್ತದೆ. ಪುರುಷಾರ್ಥ ಮತ್ತು ಆಶೀರ್ವಾದದ ಸಂಕಲ್ಪ, ಮಾತು, ವಾಣಿ, ಕರ್ಮ, ಸಂಬಂಧ ಮತ್ತು ಸಂಪರ್ಕದ ಮುಖಾಂತರ ಆಶೀರ್ವಾದಗಳನ್ನು ಕೊಡಿ ಮತ್ತು ಆಶೀರ್ವಾದಗಳನ್ನು ಪಡೆಯಿರಿ. ಒಂದೇ ವಿಚಾರ ಇರಲಿ - ಆಶೀರ್ವಾದ ನೀಡುವುದು. ಭಲೆ ನಿಮಗೆ ಶಾಪವನ್ನು ಹಾಕಲಿ ಆದರೆ ಅವರಿಗೂ ಸಹ ಆಶೀರ್ವಾದವನ್ನೇ ಕೊಡಿ. ಏಕೆಂದರೆ ನೀವು ಆಶೀರ್ವಾದದ ಸಾಗರನ ಮಕ್ಕಳು ಬೇರೆಯವರು ಮುನಿಸಿಕೊಂಡರೂ ಸಹ ನೀವು ಮುನಿಸಿಕೊಳ್ಳಬೇಡಿ. ನೀವು ರಹಸ್ಯ ಯುಕ್ತರಾಗಿರಲು ಸಾಧ್ಯವೇ? ಆಗುತ್ತದೆಯೇ? ಆಗುತ್ತದೆಯೇ? ಎರಡನೆಯ ಸಾಲಿನಲ್ಲಿ ಕುಳಿತಿರುವವರಿಗೆ ಆಗುತ್ತದೆಯೇ? ನೋಡುತ್ತಿರಿ ಈಗ ಇನ್ನು ಹೆಚ್ಚು ಬೇಜಾರು ಪಡಿಸುತ್ತಾರೆ! ಪರೀಕ್ಷೆಗಳು ಇನ್ನೂ ಅನೇಕ ಬರಲಿದೆ. ಮಾಯೆ ಕೇಳಿಸಿಕೊಳ್ಳುತ್ತಿದೆ! ಈಗ ಪತ್ರ ತೆಗೆದುಕೊಳ್ಳಿ. ದೃಢ ಸಂಕಲ್ಪ ಮಾಡಿ ನಾನು ಆಶೀರ್ವಾದವನ್ನೇ ಕೊಡುತ್ತೇನೆ ಮತ್ತು ಆಶೀರ್ವಾದವನ್ನೇ ಪಡೆಯಬೇಕಾಗಿದೆ ಆಗುತ್ತದೆಯೇ? ಮಾಯೆಯು ಭಲೆ ಬೇಜಾರು ಪಡೆಸಿದರೂ ನೀವು ರಹಸ್ಯಯುಕ್ತರಾಗಿರುತ್ತೀರಲ್ಲವೇ? ಬೇಜಾರಾಗಬಾರದು ಹಾಗೂ ಬೇರೆಯವರನ್ನು ಪಡೆಸಬಾರದು - ಇದು ಒಂದೇ**

**ಕಾರ್ಯವನ್ನು ಮಾಡಿ.** ಬೇರೆಯವರು ಭಲೆ ಬೇಜಾರಾದರೂ ತಾವು ಆಗಬಾರದು. ನಾವು ಬೇಜಾರು ಮಾಡದಿದ್ದರೂ ನಾವು ಬೇಜಾರು ಆಗಬಾರದು. ಪ್ರತಿಯೊಬ್ಬರು ಈ ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಬೇರೆಯವರನ್ನು ನೋಡಬೇಡಿ. ಅವರು ಮಾಡುತ್ತಾರೆ, ಇವರು ಮಾಡುತ್ತಾರೆ, ನಾವು ಸಾಕ್ಷಿಯಾಗಿದ್ದು ಆಟವನ್ನು ನೋಡಬೇಕಾಗಿದೆ. ಕೇವಲ ರಹಸ್ಯಯುಕ್ತ ಆಟವನ್ನೇ ನೋಡುತ್ತೀರಾ, ಬೇಜಾರು ಪಡೆಸುವಂತಹ ಆಟವನ್ನು ಮಧ್ಯ-ಮಧ್ಯದಲ್ಲಿ ನೋಡಿ, ಆದರೆ ಪ್ರತಿಯೊಬ್ಬರು ತಮಗೆ ತಾವೇ ರಾಜಿ ಮಾಡಿಕೊಳ್ಳಿ.

ಹೇ! ಮಾತೆಯರೇ ಆಗುತ್ತದೆಯೇ? ಪಾಂಡವರೇ ಆಗುತ್ತದೆಯೇ? ಬಾಪ್‌ದಾದಾ ನಕ್ಷೆಯನ್ನು ನೋಡುತ್ತಾರೆ. ಬಾಪ್‌ದಾದಾರವರ ಬಳಿ ತುಂಬಾ ದೊಡ್ಡದಾದ ಟಿ.ವಿ ಇದೆ. ಪ್ರತಿಯೊಬ್ಬರನ್ನು ನೋಡಬಹುದಾಗಿದೆ. ಯಾವುದೇ ಸಮಯದಲ್ಲಿ ಯಾರೇ ಆದರೂ ಏನೇ ಮಾಡುತ್ತಿದ್ದರೂ ಬಾಪ್‌ದಾದಾ ನೋಡುತ್ತಾರೆ. ಆದರೆ ಏನೇನು ಮಾಡುತ್ತೀರಿ ಅದನ್ನೂ ಸಹ ನೋಡುತ್ತಾರೆ. ಮಕ್ಕಳೂ ಸಹ ಬಹಳ ಬುದ್ಧಿವಂತಿಕೆಯನ್ನು ತೋರಿಸುತ್ತಾರೆ. ಒಂದುವೇಳೆ ನಿಮ್ಮ ಚತುರತೆಯನ್ನು ಬಾಪ್‌ದಾದಾ ಹೇಳಿದರೆ ನೀವು ಕೇಳಿ ಸ್ವಲ್ಪ ಚಿಂತಿತರಾಗುತ್ತೀರಿ! ನಿಮ್ಮನ್ನು ಏಕೆ ಚಿಂತಿತಗೊಳಿಸಲಿ. ಆದರೆ ಬಹಳ ಬುದ್ಧಿವಂತಿಕೆಯಿಂದ ಮಾಡುತ್ತೀರಿ. ಒಂದುವೇಳೆ ಬುದ್ಧಿವಂತಿಕೆಯನ್ನು ನೋಡಬೇಕೆಂದರೆ ಬ್ರಾಹ್ಮಣರಲ್ಲಿಯೇ ನೋಡಿ. ಆದರೆ ಈಗ ಯಾವುದರಲ್ಲಿ ಬುದ್ಧಿವಂತರಾಗಬೇಕಾಗಿದೆ? ಮನಸಾ ಸೇವೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯಿರಿ. ಹಿಂದೆ ಬೀಳಬೇಡಿರಿ. ಇದಕ್ಕಾಗಿ - ಸಮಯ ಸಿಗುವುದಿಲ್ಲ, ಅವಕಾಶ ಸಿಗುವುದಿಲ್ಲ, ಆರೋಗ್ಯ ಸರಿಯಿರುವುದಿಲ್ಲ, ಯಾರೂ ಕೇಳಲೇ ಇಲ್ಲ, ಇತ್ಯಾದಿ ಯಾವ ನೆಪವೂ ಇರುವುದಿಲ್ಲ, ಎಲ್ಲರೂ ಮಾಡಬಹುದಾಗಿದೆ. ಮಕ್ಕಳು ಓಡುವ ಆಟವನ್ನು ಆಡಿದ್ದೀರಲ್ಲವೇ! ಈಗ ಮನಸಾ ಸೇವೆಯಲ್ಲಿ ಓಡಬೇಕಾಗಿದೆ. ಒಳ್ಳೆಯದು.

**ನಾಲ್ಕೂ ಕಡೆಯ ಸರ್ವ ಶ್ರೇಷ್ಠ ಆತ್ಮೀಯತೆಯ ಅನುಭವ ಮಾಡಿಸುವಂತಹ ಆತ್ಮರಿಗೆ, ಸರ್ವ ಸಂಕಲ್ಪ ಮತ್ತು ಸ್ನೇಹದಲ್ಲಿಯೂ ಸಹ ಪವಿತ್ರತೆಯ ಪಾಠವನ್ನು ಕಲಿಯುವಂತಹ ಬ್ರಹ್ಮಾಚಾರಿ ಮಕ್ಕಳಿಗೆ, ಎಲ್ಲಾ ದೃಢ ಸಂಕಲ್ಪಧಾರಿ, ಮನಸಾ ಸೇವಾಧಾರಿ, ತೀವ್ರ ಪುರುಷಾರ್ಥಿ ಆತ್ಮರಿಗೆ, ಸದಾ ಆಶೀರ್ವಾದವನ್ನು ನೀಡಿ ಮತ್ತು ಆಶೀರ್ವಾದವನ್ನು ಪಡೆಯುವಂತಹ ಪುಣ್ಯಾತ್ಮರಿಗೆ ಬಾಪ್‌ದಾದಾರವರ ಹೃದಯರಾಮ ತಂದೆಯ ಅತೀ ಪ್ರೀತಿಯ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಕರ್ನಾಟಕದ ಸೇವಾಧಾರರೊಂದಿಗೆ:** ಸೇವೆಗಾಗಿ ಕರ್ನಾಟಕದಿಂದ ಬಂದಿರುವವರು ಎದ್ದು ನಿಲ್ಲಿರಿ. ಇಷ್ಟೊಂದು ಜನರು ಸೇವೆಯಲ್ಲಿ ಬಂದಿದ್ದೀರಿ, ಪಾರ್ಟಿಯಲ್ಲಿ ಬಂದಿರುವವರಲ್ಲ, ಸೇವಾಧಾರಿಯಾಗಿ ಬಂದಿರುವವರು. ಒಳ್ಳೆಯದು, ಇದೂ ಸಹ ಸಹಜವಾಗಿ ಶ್ರೇಷ್ಠ ಪುಣ್ಯವನ್ನು ಜಮಾ ಮಾಡಿಕೊಳ್ಳುವ ಸುವರ್ಣವಕಾಶ ಸಿಕ್ಕಿದೆ. ಭಕ್ತಿಯಲ್ಲಿ ಹೇಳಲಾಗುತ್ತದೆ, ಒಬ್ಬ ಬ್ರಾಹ್ಮಣರ ಸೇವೆಯನ್ನು ಮಾಡುವುದರಿಂದ ಬಹಳ ಪುಣ್ಯ ಪ್ರಾಪ್ತಿಯಾಗುತ್ತದೆ. ಇಲ್ಲಿ ಎಷ್ಟೊಂದು ಶ್ರೇಷ್ಠ ಸತ್ಯ ಬ್ರಾಹ್ಮಣರ ಸೇವೆಯನ್ನು ಮಾಡುತ್ತೀರಿ. ಇಂತಹ ಒಳ್ಳೆಯ ಚಾನ್ಸ್ ಸಿಗುತ್ತದೆಯಲ್ಲವೇ! ಚೆನ್ನಾಗಿದೆಯೇ, ಧಣಿವಾಯಿತೇ? ಧಣಿವಾಗಲಿಲ್ಲವೇ! ಮಜಾ ಇದೆಯೇ! ಒಂದುವೇಳೆ ಸತ್ಯ ಹೃದಯದಿಂದ ಪುಣ್ಯ ಎಂದು ತಿಳಿದು ಸೇವೆ ಮಾಡಿದರೆ ಅದರ ಪ್ರತ್ಯೇಕ ಫಲ ಧಣಿವಾಗುವುದಿಲ್ಲ, ಖುಷಿಯಾಗುತ್ತದೆ. ಈ ಪ್ರತ್ಯೇಕ ಫಲ ಪುಣ್ಯದ ಜಮಾದ ಅನುಭವ ಮಾಡಿಸುತ್ತದೆ.

ಆದರೆ ಯಾವುದೇ ಕಾರಣದಿಂದ ಸ್ವಲ್ಪವೂ ಸುಸ್ತಾದರೆ ಅಥವಾ ಸ್ವಲ್ಪ ಮಾತ್ರವೂ ಅನುಭವಾದರೆ ಸತ್ಯಹೃದಯದಿಂದ ಸೇವೆ ಮಾಡಲಿಲ್ಲ ಎಂದು ತಿಳಿದುಕೊಳ್ಳಿ. ಸೇವೆಯೆಂದರೆ ಪ್ರತ್ಯಕ್ಷ ಫಲ - ಮೇವಾ. ಸೇವೆ ಮಾಡುವುದಿಲ್ಲ ಆದರೆ ಫಲ ತಿನ್ನುತ್ತಾರೆ. ಆದರೆ ಕರ್ನಾಟಕದ ಸರ್ವ ಸೇವಾಧಾರಿಗಳು ತಮ್ಮ ಒಳ್ಳೆಯ ಸೇವೆಯ ಪಾತ್ರವನ್ನು ಮಾಡಿದಿರಿ. ಹಾಗೂ ಸೇವೆಯ ಫಲವನ್ನು ತಿಂದಿರಿ.

ಒಳ್ಳೆಯದು ಎಲ್ಲಾ ಶಿಕ್ಷಕಿಯರು ಚೆನ್ನಾಗಿದ್ದೀರಾ? ಶಿಕ್ಷಕಿಯರಿಗಂತೂ ಅನೇಕ ಬಾರಿ ತಂದೆಯ ಮಿಲನದ ಅವಕಾಶ ಸಿಗುತ್ತದೆ. ಇದೂ ಸಹ ಭಾಗ್ಯದ ಗುರುತಾಗಿದೆ. ಈಗ ಶಿಕ್ಷಕಿಯರು ಮನಸಾ ಸೇವೆಯಲ್ಲಿ ರೇಸ್ ಮಾಡಬೇಕಾಗಿದೆ. ಮನಸಾ ಸೇವೆ ಮಾಡುತ್ತಿದ್ದೇನೆಂದು ಇಡೀ ದಿವಸ ಅದರಲ್ಲೇ ಕುಳಿತುಬಿಡುವುದಿಲ್ಲ. ಯಾರಾದರು ಕೋರ್ಸ್ಗೆ ಬಂದಾಗ ನಾನು ಮನಸಾ ಸೇವೆ ಮಾಡುತ್ತಿದ್ದೇನೆಂದು ಕಳುಹಿಸಿಬೇಡಿರಿ. ಏನಾದರೂ ಕರ್ಮಯೋಗದ ಸಮಯ ಬಂದಾಗ ನಾನು ಮನಸಾ ಸೇವೆ ಮಾಡುತ್ತಿದ್ದೇನೆಂದು ಹೇಳುವುದು ಸರಿಯಲ್ಲ. ಸಮತೋಲನ ಇರಬೇಕು. ಕೆಲವರಿಗೆ ಹೆಚ್ಚು ನಶೆ ಏರಿಬಿಡುತ್ತದೆಯಲ್ಲವೇ! ಈ ರೀತಿಯ ನಶೆಯನ್ನು ಏರಿಸಿಕೊಳ್ಳಬಾರದು. ಸಮತೋಲನದಲ್ಲಿ ಆಶೀರ್ವಾದ ಇದೆ. ಸಮತೋಲನೆ ಇಲ್ಲವೆಂದರೆ ಆಶೀರ್ವಾದ ಇಲ್ಲ. ಒಳ್ಳೆಯದು.

ಈಗ ಒಂದು ಸೆಕೆಂಡಿನಲ್ಲಿ ಎಲ್ಲರೂ ಮನಸಾ ಸೇವೆಯ ಅನುಭವವನ್ನು ಮಾಡಿ. ಆತ್ಮರಿಗೆ ಶಾಂತಿ ಮತ್ತು ಶಕ್ತಿಯ ದಾನವನ್ನು ನೀಡಿ. ಒಳ್ಳೆಯದು.

ದಾದೀಜಿ, ಜಾನಕಿ ದಾದೀಜಿಯವರೊಂದಿಗೆ ವ್ಯಕ್ತಿಗತ ಮಿಲನ:- ಬಾಪ್‌ದಾದಾ ತ್ರಿಮೂರ್ತಿ ಬ್ರಹ್ಮನ ದೃಶ್ಯವನ್ನು ತೋರಿಸಿದರು. ನೀವೆಲ್ಲರೂ ನೋಡಿದಿರಲ್ಲವೇ? ಏಕೆಂದರೆ ತಂದೆಯ ಸಮಾನ ತಂದೆಯ ಪ್ರತಿ ಕಾರ್ಯದಲ್ಲಿ ಜೊತೆಗಾರರಲ್ಲವೇ! ಆದುದರಿಂದ ಈ ದೃಶ್ಯವನ್ನು ತೋರಿಸಲಾಯಿತು. ಬಾಪ್‌ದಾದಾ ನೀವಿಬ್ಬರಿಗೂ ವಿಶೇಷ ಶಕ್ತಿಗಳನ್ನು ವಿಲ್ ಮಾಡಿದ್ದಾರೆ. ವಿಲ್ ಪವರನ್ನೂ ಸಹ ಕೊಟ್ಟಿದ್ದಾರೆ ಹಾಗೂ ಎಲ್ಲಾ ಶಕ್ತಿಗಳನ್ನು ವಿಲ್ ಮಾಡಿದ್ದೇವೆ ಆದುದರಿಂದ ಆ ಎಲ್ಲಾ ಶಕ್ತಿಗಳು ತಮ್ಮ ಕೆಲಸವನ್ನು ಮಾಡುತ್ತಿವೆ. ಮಾಡಿ ಮಾಡಿಸುವವರು ಮಾಡಿಸುತ್ತಿದ್ದಾರೆ ಹಾಗೂ ನಿಮಿತ್ತರಾಗಿ ಮಾಡುತ್ತಿದ್ದೀರಿ ಆ ಈ ರೀತಿ ಮಾಡಲು ಮಜಾ ಅನಿಸುತ್ತದೆಯಲ್ಲವೇ! ಮಾಡಿ ಮಾಡಿಸುವವರ ಮಾಡಿಸುತ್ತಿದ್ದಾರೆ. ಆದುದರಿಂದ ಮಾಡಿ ಮಾಡಿಸುವವರು ಮಾಡಿಸುತ್ತಿರುವ ಕಾರಣ ನೀವು ನಿಶ್ಚಿಂತರಾಗಿ ಮಾಡುತ್ತಿದ್ದೀರಿ. ಚಿಂತೆ ಇರುವುದಿಲ್ಲವಲ್ಲವೇ! - ನೀವು ನಿಶ್ಚಿಂತ ಚಕ್ರವರ್ತಿಗಳಾಗಿದ್ದೀರಿ. ಮಾಸ್ಟರ್ ಡಿಗ್ರಿಯನ್ನು ಅರ್ಥಾತ್ - ತಂದೆಯ ಸಮಾನ ಸ್ಥಾನವನ್ನು ಪಾಸ್ ಮಾಡಿದ್ದೀರಿ, ಕೇವಲ ಈಗ ಪುನರಾವರ್ತನೆ ಮಾಡಬೇಕು. ಪುನರಾವರ್ತನೆ ಮಾಡುವಾಗ ಕಷ್ಟವಾಗುವುದಿಲ್ಲ. ಇಲ್ಲವಾದರೆ ಮಾಸ್ಟರ್ ಡಿಗ್ರಿಯನ್ನು ಯಾರು ತೆಗೆದುಕೊಳ್ಳುತ್ತಿದ್ದರು! ಬೇರೆ ಮಾಸ್ಟರ್ ಡಿಗ್ರಿ ತೆಗೆದುಕೊಳ್ಳುವವರೂ ಸಹ ನಿಮ್ಮ ಜೊತೆಗಾರರಾಗಿರುತ್ತಾರೆ. ಜೊತಗಾರರೂ ಬೇಕಲ್ಲವೇ! ಆದರೆ ಆಗಲೇಬೇಕಾಗಿದೆ. ಅರ್ಥಾತ್ ನೀವು ತೇರ್ಗಡೆ ಆಗಿಯೇ ಇದ್ದೀರಿ. ತೇರ್ಗಡೆ ಆಗಿಲ್ಲವೇ! ಎಷ್ಟೊಂದು ಸಾರಿ ತೇರ್ಗಡೆ ಆಗಿದ್ದೀರಿ.....! ಎಷ್ಟೊಂದು ಸಾರಿ ತೇರ್ಗಡೆ ಆಗಿದ್ದೀರಿ.....! (ಅನೇಕ ಸಾರಿ) ಅನೇಕ ಸಾರಿ ಮಾಡಿರುವ ಕಾರಣ ಅದು ಆಗಿಯೇ ಇದೆ. ಒಳ್ಳೆಯದು. ಆರೋಗ್ಯವನ್ನು ಕುರಿತು ಜ್ಞಾನಪೂರ್ಣರಾಗಿರಬೇಕು. ಸ್ವಲ್ಪ ಏರು-ಪೇರು ಆಗುತ್ತದೆ.

ಇದರಲ್ಲಿಯೂ ನಾಲೆಡ್ಜ್ಫುಲ್ ಆಗಬೇಕಾಗುತ್ತದೆ. ಏಕೆಂದರೆ ಇನ್ನೂ ಬಹಳ ಸೇವೆ ಮಾಡಬೇಕಾಗಿದೆ. ಹೀಗೆ ಆರೋಗ್ಯವೂ ಸಹಯೋಗ ಕೊಡುತ್ತದೆ. ಈ ರೀತಿ ಡಬಲ್ ನಾಲೆಡ್ಜ್ ಫುಲ್ ಆಗಿದ್ದೀರಿ. ಒಳ್ಳೆಯದು.

ರಿವೈಸ್ ಕೋರ್ಸ್ 15-12-2001.

***ಏಕವ್ರತದವರಾಗಿ ಪವಿತ್ರತೆಯ ಧಾರಣೆಯ ಮುಖಾಂತರ ಆತ್ಮೀಯತೆಯಲ್ಲಿದ್ದು ಮನಸಾ ಸೇವೆಯನ್ನು ಮಾಡಿರಿ.***

ವಾಣಿ ಮತ್ತು ಮನಸಾ ಸೇವೆಯಲ್ಲಿ ಸಮತೋಲನೆಯಿದ್ದರೆ ಬಹಳಷ್ಟು ಆಶೀರ್ವಾದಗಳು ಲಭಿಸುತ್ತವೆ. ಡಬಲ್ ಖಾತೆಯು ಜಮಾ ಆಗುತ್ತದೆ ಪುರುಷಾರ್ಥದ ಖಾತೆ ಮತ್ತು ಆಶೀರ್ವಾದಗಳ ಖಾತೆಯೂ ಸಹ ಜಮಾ ಆಗುತ್ತದೆ. ಆದ್ದರಿಂದ ಸಂಕಲ್ಪದಿಂದ, ಮಾತಿನಿಂದ, ಕರ್ಮದ ಮೂಲಕ ಸಂಬಂಧ ಸಂಪರ್ಕಗಳ ಮೂಲಕ ಆಶೀರ್ವಾದಗಳನ್ನು ಕೊಡಿ ಮತ್ತು ಪಡೆದುಕೊಳ್ಳಿ. ಒಂದು ವಿಷಯವನ್ನು ಮಾಡಿರಿ ಆಶೀರ್ವಾದಗಳನ್ನು ಕೊಡಬೇಕು ಅಷ್ಟೇ... ಯಾರಾದರೂ ಶಾಪಕೊಟ್ಟರೂ ಸಹ ನೀವು ಆಶೀರ್ವಾದಗಳನ್ನು ಕೊಡಿ ಯಾರಾದರೂ ಕ್ರೋಧದಲ್ಲಿ ಬಂದರೂ ನೀವು ಕ್ರೋಧದಲ್ಲಿ ಬರಬಾರದು. ನೀವು ರಾಜಿಯಾಗಿರಬೇಕು ಎಂದು ತಿಳಿಸುತ್ತಾ ಬಾಪ್‍ದಾದಾ ಪ್ರತಿಯೊಂದು ಮಗುವಿನ ಪವಿತ್ರತೆಯ ಆಧಾರದಿಂದ ಆತ್ಮೀಯತೆಯನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಮನಸಾ, ವಾಚಾ, ಕರ್ಮದಲ್ಲಿ ಪವಿತ್ರತೆಯ ಮೂಲಕ ನನ್ನ ನಯನಗಳು, ಮುಗುಳ್ನಗೆ, ಚಲನೆ, ಮುಖಪುಟವು ಫರಿಶ್ತೆಯ ಸಮಾನವಾಗಿ ಡಬಲ್ ಲೈಟ್ ಆಗಿ ಇವೆ.

2. ವರದಾನಿ ಆತ್ಮನಾದ ನಾನು ನನ್ನ ಆತ್ಮಿಕವಾದ ಮಾತಿನಿಂದ ಸ್ವಯಂಗೆ ಮತ್ತು ಅನ್ಯರಿಗೂ ಸುಖ, ಶಾಂತಿಯ ಅನುಭವವನ್ನು ಮಾಡಿಸುತ್ತಾ ಇತರಾತ್ಮರನ್ನು ಜೀವನದಲ್ಲಿ ಮುಂದಕ್ಕೆ ಕರೆದೊಯ್ಯಲು ನಿಮಿತ್ತವಾಗಿದ್ದೇನೆ

3. ನಾನು ಆತ್ಮಿಕ ಕರ್ಮದ ಮೂಲಕ ಸ್ವಯಂಗೆ ಮತ್ತು ಇತರರಿಗೂ ಸಹಜವಾಗಿ ಕರ್ಮಯೋಗಿಯಾಗಿ, ಸಹಜಯೋಗಿಯಾಗಿ ಅನುಭವವಾಗುತ್ತಿದ್ದೇನೆ.

4. ನಾನು ಪ್ರತಿಯೊಂದು ಮಾತಿನಲ್ಲಿ, ಪ್ರತಿಯೊಂದು ಸಂಕಲ್ಪದಲ್ಲಿ, ಬ್ರಹ್ಮಚಾರಿಯಾಗಿ ಇರುತ್ತಾ ನನ್ನ ಸಂಬಂಧ ಸಂಪರ್ಕದಲ್ಲಿ ಬರುವ ಆತ್ಮರಿಗೆ ನಾನು ಬ್ರಹ್ಮಾ ತಂದೆಯ ಸಮಾನವಾಗಿ ಅನುಭವವಾಗುತ್ತಿದ್ದೇನೆ.

5. ನಾನು ಏಕವ್ರತವಾಗುವುದರಿಂದ ಏಕಾಗ್ರವಾಗಿ, ಅಚಲವಾಗಿ, ಸ್ಥಿರವಾಗಿ ಸ್ವತಹವಾಗಿ ಆಗಿದ್ದೇನೆ, ಒಂದೇ ಮತದ ಮೇಲೆ ನಡೆಯುವುದರಿಂದ ಸದ್ಗತಿ, ಏಕೀರಸ ಸ್ಥಿತಿಯನ್ನೂ ಸಹ ಸಹಜವಾಗಿ ತಯಾರು ಮಾಡಿಕೊಂಡಿದ್ದೇನೆ.

6. ನಾನು ಮನಸಾ ಸೇವೆಯಲ್ಲಿ ತೊಡಗಿ ಆತ್ಮರಿಗೆ ಮುಕ್ತಿ, ಶಾಂತಿ, ಆಶ್ರಯವನ್ನು ಕೊಡುವ ದಯಾ ಹೃದಯ ಸ್ವರೂಪ, ಮಾಸ್ಟರ್ ಸರ್ವಶಕ್ತಿವಂತನು.

7. ನಾನು ವಾಚಾ ಸೇವೆ ಮತ್ತು ಮನಸಾ ಸೇವೆ ಎರಡರ ಸಮತೋಲನೆಯನ್ನು ಇಟ್ಟುಕೊಂಡಿದ್ದೇನೆ.

8. ನಾನು ಸ್ವಪುರುಷಾರ್ಥದ ಖಾತೆಯೊಂದಿಗೆ ಮನಸಾ ಸೇವೆಯಿಂದ ಆಶೀರ್ವಾದಗಳ ಖಾತೆಯನ್ನು ಸಹ ಜಮಾ ಮಾಡಿಕೊಂಡಿದ್ದೇನೆ.

9. ನಾನು ಮನಸಾ ಸೇವೆಯ ಜವಾಬ್ದಾರಿ ಕಿರೀಟವನ್ನು ಧರಿಸಿದ್ದೇನೆ.

10. ನಾನು ದುಃಖಿ ಆತ್ಮರಿಗೆ ಸುಖ ಮತ್ತು ಶಾಂತಿಯ ಬಿಂದುಗಳನ್ನು ಕೊಡುತ್ತಿದ್ದೇನೆ.

11. ನಾನು ತಂದೆಯ ಸಮಾನವಾಗಿ ಸಂಪನ್ನವಾಗಿ ಮತ್ತು ಸಂಪೂರ್ಣವಾಗಿ ಜೊತೆ ಹೋಗುವ ಎವೆರ್ ರೆಡಿ ಆಗಿದ್ದೇನೆ.

12. ನಾನು ಸಂಕಲ್ಪ, ಮಾತು, ಕರ್ಮ, ಸಂಬಂಧ ಮತ್ತು ಸಂಪರ್ಕದ ಮೂಲಕ ಆಶೀರ್ವಾದಗಳನ್ನು ಕೊಡುತ್ತಿದ್ದೇನೆ ಮತ್ತು ಆಶೀರ್ವಾದಗಳನ್ನು ಪಡೆದು ಡಬಲ್ ಖಾತೆಯನ್ನು ಜಮಾ ಮಾಡಿಕೊಳ್ಳುತ್ತಿದ್ದೇನೆ.(ಸ್ವಪುರುಷಾರ್ಥ ಮತ್ತು ಆಶೀರ್ವಾದಗಳು)

13. ಯಾರಾದರೂ ಶಾಪವನ್ನು ಕೊಟ್ಟರೂ ಕ್ರೋಧದಲ್ಲಿ ಬಂದರೂ ನಾನು ರಾಜಿಯಾಗಿ ಆಶೀರ್ವಾದಗಳನ್ನು ಕೊಡಬೇಕು ಮತ್ತು ಆಶೀರ್ವಾದಗಳನ್ನು ಪಡೆಯಬೇಕೆಂಬ ದೃಢಸಂಕಲ್ಪವನ್ನಿಟ್ಟು ಸಾಕ್ಷಿಯಾಗಿ ಆಟವನ್ನು ನೋಡುತ್ತಿದ್ದೇನೆ.

14. ನಾನು ಮನಸಾ ಸೇವೆಯಲ್ಲಿ ಬುದ್ಧಿಯುಳ್ಳವನಾಗಿರುತ್ತಾ ಮೊದಲ ನಂಬರನ್ನು ಪಡೆದಿದ್ದೇನೆ.